**NOVEMBER 02, 2024**

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- 69ನೇ ಕನ್ನಡ ರಾಜ್ಯೋತ್ಸವ ಹಾಗೂ ಕರ್ನಾಟಕ ನಾಮಕರಣ ಸಂಭ್ರಮದ ಸುವರ್ಣ ಮಹೋತ್ಸವ; 169 ಜನ ಸಾಧಕರಿಗೆ, ಪುರಸ್ಕಾರ ಪ್ರದಾನ.
- ಕರ್ನಾಟಕದ ಸಂಸ್ಕೃತಿ ಮತ್ತು ಸಂಪ್ರದಾಯಗಳು, ಅನುಕರಣೀಯ – ನರೇಂದ್ರ ಮೋದಿ.
- ದೀಪಾವಳಿಯ, ಕಾರ್ತಿಕ ಶುದ್ಧ ಬಲಿ ಪಾಡ್ಯಮಿ ಆಚರಣೆ, ಇಂದು.
- ಮಂಗಳೂರು ಪಿಲಿಕುಳದ, ಡಾಕ್ಟರ್ ಶಿವರಾಮ ಕಾರಂತ ಜೈವಿಕ ಉದ್ಯಾನದಲ್ಲಿ, ಇದೇ 17 ಮತ್ತು 18 ರಂದು 'ಪಿಲಿಕುಳ ಕಂಬಳ'.

<><><>

ಈಗ ವಾರ್ತೆಗಳ ವಿವರ

<><><>

'ಕನ್ನಡ ರಾಜ್ಯೋತ್ಸವ' ಅತ್ಯಂತ ವಿಶೇಷ ಸಂದರ್ಭವಾಗಿದ್ದು, ಕರ್ನಾಟಕದ ಅನುಕರಣೀಯ ಸಂಸ್ಕೃತಿ ಮತ್ತು ಸಂಪ್ರದಾಯಗಳಿಗೆ ಮನ್ನಣೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಬಣ್ಣಿಸಿದ್ದಾರೆ. ಕರ್ನಾಟಕ ಮಹಾನ್ ವ್ಯಕ್ತಿಗಳನ್ನು ಪಡೆದಿದ್ದು, ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಅಭಿವೃದ್ಧಿ ಮತ್ತು ನಾವಿನ್ಯತೆಗೆ ಶಕ್ತಿ ತುಂಬುತ್ತಿದ್ದಾರೆ. ಕರ್ನಾಟಕದ ಜನ ಸದಾ ಸಂತೋಷ ಮತ್ತು ಯಶಸ್ಸಿನಿಂದ ಕೂಡಿರಲಿ ಎಂದು, ಸಾಮಾಜಿಕ ಮಾಧ್ಯಮ ಎಕ್ಸ್ ಮೂಲಕ ಹಾರೈಸಿದ್ದಾರೆ.

<><><>

ರಾಜ ಭವನ ಮತ್ತು ಕನ್ನಡ, ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ರಾಜಭವನದಲ್ಲಿ ಆಯೋಜಿಸಿದ್ದ, 69ನೇ ಕರ್ನಾಟಕ ರಾಜ್ಯೋತ್ಸವ ಸಂಭ್ರಮಾಚರಣೆಯಲ್ಲಿ, ರಾಜ್ಯಪಾಲ ಥಾವರಚಂದ ಗೆಹ್ಲೋಟ್ ಅವರು, ವರ್ಚುವಲ್ ವೇದಿಕೆ ಮೂಲಕ ಪಾಲ್ಗೊಂಡು, ಶುಭ ಕೋರಿದರು.

<><><>

ರಾಜ್ಯದಲ್ಲಿ ತಯಾರಾಗುವ ಉತ್ಪನ್ನಗಳ ಮೇಲೆ, ಕನ್ನಡದಲ್ಲೂ ಮಾಹಿತಿ ಇರಬೇಕೆಂಬುದನ್ನು ಕಡ್ಡಾಯಗೊಳಿಸಲು, ಚಿಂತನೆ ನಡೆದಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ, ತಿಳಿಸಿದ್ದಾರೆ. ಬೆಂಗಳೂರಿನ ವಿಧಾನಸೌಧದ ಮೆಟ್ಟಿಲುಗಳ ಮೇಲೆ ನಡೆದ, 69ನೇ ಕನ್ನಡ ರಾಜ್ಯೋತ್ಸವ ಹಾಗೂ ಕರ್ನಾಟಕ ನಾಮಕರಣದ ಸುವರ್ಣ ಮಹೋತ್ಸವ ಹಿನ್ನೆಲೆ, ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ಮೈಸೂರು ಜಿಲ್ಲಾಧಿಕಾರಿ ಹಳೆಯ ಅಠಾರ ಕಚೇರಿಯನ್ನು, ಕನ್ನಡ ವಸ್ತುಸಂಗ್ರಹಾಲಯವಾಗಿಸುವ, ಸಿದ್ಧತೆ ನಡೆದಿದೆ ಎಂದು, ಮುಖ್ಯಮಂತ್ರಿ ಪ್ರಕಟಿಸಿದರು.

<><><>

ರಾಜ್ಯಾದ್ಯಂತ ವರ್ಣ ರಂಜಿತ ಸಮಾರಂಭಗಳಲ್ಲಿ, ಕನ್ನಡದ ಪ್ರಥಮ ಹಲ್ಮಿಡಿ ಶಾಸನದ ಪ್ರತಿಕೃತಿಯನ್ನು ಗಣ್ಯರು ಅನಾವರಣ ಗೊಳಿಸಿದರು. ಧಾರವಾಡದ ಆಲೂರು ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ, ಹಲ್ಮಿಡಿ ಪ್ರತಿಕೃತಿಯನ್ನು ಅನಾವರಣಗೊಳಿಸಿದರು.

<><><>

ಸಮಾರಂಭದಲ್ಲಿ ಪಾಲ್ಗೊಂಡಿದ್ದ, ಧಾರವಾಡದ ಡಾಕ್ಟರ್ ಎಂ.ಎಂ, ಕಲಬುರ್ಗಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಅಧ್ಯಕ್ಷ, ಡಾಕ್ಟರ್ ವೀರಣ್ಣ ರಾಜೂರ ಅವರು, ಪ್ರದೇಶ ಸಮಾಚಾರಕ್ಕಾಗಿ, ಹಲ್ಮಿಡಿ ಶಾಸನದ ಐತಿಹಾಸಿಕ ಪ್ರಸ್ತುತತೆಯನ್ನು ವಿವರಿಸಿದ್ದಾರೆ.

<><><>

ಡಾ. ವೀರಣ್ಣ ರಾಜೂರ ಧ್ವನಿ 45 ಸೆಕೆಂದುಗಳು

<><><>

ವಿಜಯನಗರ ಜಿಲ್ಲೆ, ಹಗರಿಬೊಮ್ಮನಹಳ್ಳಿ ತಾಲೂಕು, ಪಿಂಜಾರ್ ಹೆಗ್ಡಾಳ್ ಗ್ರಾಮದ 62 ವರ್ಷದ ಜೆ.ಎಂ. ವೀರಸಂಗಯ್ಯ, ಸಮಾಜ ಸೇವಾ ವಿಭಾಗದಲ್ಲಿ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ, ವಿಶಿಷ್ಟ ವ್ಯಕ್ತಿ. ರೈತ ಕುಟುಂಬದ ವೀರಸಂಗಯ್ಯ, ತಾಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಸೆಂಟರ್ ಆರಂಭಿಸುವಲ್ಲಿ, ಮಹತ್ವದ ಕೆಲಸ ಮಾಡಿದ್ದಾರೆ. ಅಲ್ಲಿ 2 ಸಾವಿರದ 800 ಜನ ಡಯಾಲಿಸಿಸ್ ಚಿಕಿತ್ಸೆಗೆ, ಒಳಪಟ್ಟು ಗುಣಮುಖರಾಗಿದ್ದಾರೆ. 40ಕ್ಕೂ ಹೆಚ್ಚು ಜನ ಮೂತ್ರಪಿಂಡದ ದಾನ ಮಾಡಿ, ಜೀವದಾನಿಗಳಾಗಲು ಅವರು ಆಪ್ತ ಸಮಾಲೋಚನೆ ನಡೆಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಅವರು, ಪ್ರಶಸ್ತಿ ಪಡೆದ ಸಂತಸ ಹಂಚಿಕೊಂಡಿದ್ದಾರೆ.

<><><>

ಜೆ.ಎಂ. ವೀರಸಂಗಯ್ಯ ಧ್ವನಿ 38 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ದೀಪಾವಳಿಯ ಕಾರ್ತಿಕ ಶುದ್ಧ ಬಲಿ ಪಾಡ್ಯಮಿ ಇಂದು. ದೀಪಾವಳಿ ಭಾರತೀಯರಿಗೆ ಬಹು ದೊಡ್ಡ ಹಬ್ಬ. ದೀಪ ಎಂದರೆ ಪ್ರಕಾಶ, 'ಅವಳಿ' ಎಂದರೆ ಮಾಲೆ, ಸಾಲು ಎಂದರ್ಥ. ದೀಪಾವಳಿ, ದೀಪಗಳ ಸಾಲಿನಂತೆ ಹಬ್ಬಗಳ ಸಾಲೂ ಹೌದು. ಪ್ರತಿ ಮನೆ–ಮನೆಯಲ್ಲೂ, ಪ್ರತಿಯೊಬ್ಬರ ಮನದಲ್ಲೂ, ಜ್ಞಾನದ ದೀಪ ನಿರಂತರವಾಗಿ ಬೆಳಗಲಿ ಎಂಬುದೇ, ದೀಪಾವಳಿ ಹಬ್ಬದ, ಸಂದೇಶ.

<><><>

ದೀಪಾವಳಿ ಹಬ್ಬದ ಎರಡನೇ ದಿನದ ಸಂಭ್ರಮದಲ್ಲಿ, ನಿನ್ನೆ ಪಟಾಕಿ ಸಿಡಿಸುವಾಗ ಬೆಂಗಳೂರು ನಗರದಲ್ಲಿ ಸಂಭವಿಸಿದ ಅವಘಡದಲ್ಲಿ, ಮಕ್ಕಳು ಸೇರಿದಂತೆ 8 ಕ್ಕೂ ಹೆಚ್ಚು ಜನರಿಗೆ ಗಾಯಗಳಾಗಿದ್ದು, ನಾರಾಯಣ ನೇತ್ರಾಲಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

<><><>

ದೀಪಾವಳಿಯ ಸಂಭ್ರಮದಲ್ಲಿ ಪರಿಸರ ಕಾಳಜಿಯೂ ಇರಲಿ. ಚಿಕ್ಕಮಕ್ಕಳು ಪಟಾಕಿ ಸಿಡಿಸುವಾಗ ಎಚ್ಚರ ವಹಿಸಿ. ಹಸಿರು ಪಟಾಕಿಗಳನ್ನು ಮಾತ್ರವೇ ಬಳಸಿ, ಸುರಕ್ಷಿತರಾಗಿರಿ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಕಳಕಳಿಯ ಮನವಿ ಮಾಡಿದ್ದಾರೆ.

<><><>

ಸುರಕ್ಷತೆಯ ಕನ್ನಡಕವನ್ನು ಕಡ್ಡಾಯ ಬಳಸುವಂತೆ, ಪಟಾಕಿ ಸಿಡಿದು ಸುಟ್ಟ ಗಾಯ ಉಂಟಾದಲ್ಲಿ, ತಕ್ಷಣ ನೀರಿನಿಂದ ತೊಳೆದು, ಕಿಡಿ ಕಣ್ಣಿಗೆ ಬಿದ್ದರೆ ಉಜ್ಜಿಕೊಳ್ಳದೇ, ಮನೆಮದ್ದಿಗೆ ಒತ್ತು ನೀಡಿ, ಚಿಕಿತ್ಸೆಯ 'ಗೋಲ್ಡನ್ ಅವರ್' ಅಮೂಲ್ಯ ಸಮಯವನ್ನು ವ್ಯರ್ಥ ಮಾಡದೇ, ಸಮೀಪದ ಆಸ್ಪತ್ರೆಗೆ ಧಾವಿಸಿ, ತಜ್ಞ ವೈದ್ಯರಿಂದ ಚಿಕಿತ್ಸೆ ಪಡೆಯುವಂತೆ, ಭಾರತೀಯ ವೈದ್ಯಕೀಯ ಮಂಡಳಿಯ ತಜ್ಞರು ಆಕಾಶವಾಣಿ ಮೂಲಕ ಮನವಿ ಮಾಡಿದ್ದಾರೆ.

<><><>

ರಾಜ್ಯದ ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿ, ಪಟಾಕಿ ಸಿಡಿತದ ಗಾಯಗಳಿಗೆ ತುರ್ತು ಚಿಕಿತ್ಸೆ ನೀಡಲು, ದಿನದ 24 ತಾಸೂ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ ಗುಂಡೂರಾವ್ ತಿಳಿಸಿದ್ದಾರೆ.

<><><>

ಮಂಗಳೂರು ಪಿಲಿಕುಳದ, ಡಾಕ್ಟರ್ ಶಿವರಾಮ ಕಾರಂತ ಜೈವಿಕ ಉದ್ಯಾನದಲ್ಲಿ, ಈ ವರ್ಷದಿಂದ, ಸರ್ಕಾರಿ ಪ್ರಾಯೋಜಿತ, 'ಪಿಲಿಕುಳ ಕಂಬಳ'ವನ್ನು, ಇದೇ 17 ಮತ್ತು 18 ರಂದು ನಡೆಸಲು ನಿರ್ಧರಿಸಲಾಗಿದೆ ಎಂದು ದಕ್ಷಿಣಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ದಕ್ಷಿಣಕನ್ನಡ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸಭೆ ನಡೆಸಿದ ಅವರು, ಕಂಬಳಕ್ಕೆ ಸೂಕ್ತ ತಯಾರಿ ಹಾಗೂ ರೂಪುರೇಷೆಗಳನ್ನು ಸಿದ್ಧಪಡಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

<><><>

ಉತ್ತರಕನ್ನಡ ಜಿಲ್ಲೆಯಲ್ಲಿ, ಮೀನುಗಾರಿಕೆ ಜನರ ಜೀವನೋಪಾಯವಾಗಿದ್ದು, ಭಟ್ಕಳ ತಾಲೂಕಿನ ಅಳ್ವೆಕೋಡಿ, ತೆಂಗಿನಗುಂಡಿಯಲ್ಲಿ, ಮೀನುಗಾರಿಕೆ ಇಳಿದಾಣ ಕೇಂದ್ರಗಳನ್ನು, ಮೀನುಗಾರಿಕೆ

ಬಂದರುಗಳಾಗಿ ಮೇಲ್ದರ್ಜೆಗೇರಿಸಲಾಗಿದೆ ಎಂದು, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ಖಾತೆ ಸಚಿವ ಮಂಕಾಳ ವೈದ್ಯ ತಿಳಿಸಿದ್ದಾರೆ. ಕಾರವಾರದ ಜಿಲ್ಲಾ ಪೊಲೀಸ್ ಪಡೆ ಕವಾಯತು ಮೈದಾನದಲ್ಲಿ, ರಾಜ್ಯೋತ್ಸವಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು. ಅಂಕೋಲಾ ತಾಲೂಕಿನ ಕೇಣಿಯಲ್ಲಿ, 'ಟ್ರಿಪಲ್ ಪಿ' – ಸಾರ್ವಜನಿಕರು, ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ, ಬಂದರನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ ಎಂದರು. ಜಿಲ್ಲೆಯ ಪರಿಸರಕ್ಕೆ ಹಾನಿಯಾಗದಂತೆ, ಎಲ್ಲರಿಗೂ ಅನುಕೂಲವಾಗುವ ರೀತಿಯಲ್ಲಿ, ಪ್ರವಾಸೋದ್ಯಮ ಉತ್ತೇಜಿಸಲು, ರಫ್ತು ಮತ್ತು ಸರಕು ಸಾಗಾಣಿಕೆಗಾಗಿ, ಕಾರವಾರ ಬಂದರನ್ನು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಸಚಿವ ವೈದ್ಯ ತಿಳಿಸಿದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಧಾರವಾಡದ, ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ, ಕನ್ನಡ ರಾಜ್ಯೋತ್ಸವ ಹಾಗೂ ಕರ್ನಾಟಕ ನಾಮಕರಣಗೊಂಡ, 50ರ ಸಂಭ್ರಮದ ಅಂಗವಾಗಿ, ಕನ್ನಡಾಂಬೆಗೆ ಗೌರವ ಸಮರ್ಪಣೆ ಜರುಗಿತು.

<><><>

ಹೊಸ ದಿಲ್ಲಿಯ ಕರ್ನಾಟಕ ಸಂಘದಲ್ಲಿ ಆಯೋಜಿಸಿದ್ದ, 69ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ, ಕೇಂದ್ರ ಜಲಶಕ್ತಿ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಭುವನೇಶ್ವರಿ ವಿಗ್ರಹಕ್ಕೆ ಗೌರವ ಅರ್ಪಿಸಿ, ಧ್ವಜಾರೋಹಣ ನೆರವೇರಿಸಿದರು.

<><><>

ಮಂಡ್ಯದಲ್ಲಿ, ಡಿಸೆಂಬರ್ 20, 21 ಹಾಗೂ 22 ರಂದು ನಡೆಯಲಿರುವ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ, ಸಾರ್ವಜನಿಕರನ್ನು ಆಹ್ವಾನಿಸಲು ಸಿದ್ಧವಾಗಿರುವ, ಪ್ರಚಾರ ರಥಕ್ಕೆ, ಸಚಿವ ಚಲುವರಾಯಸ್ವಾಮಿ ಚಾಲನೆ ನೀಡಿದರು.

<><><>

ಡಾಕ್ಟರ್ ಹಿರೇಮಲ್ಲೂರ ಈಶ್ವರನ್ ಸ್ಮರಣೆಯ ದತ್ತಿ ಅಂಗವಾಗಿ, ರಾ.ಹ. ದೇಶಪಾಂಡೆ ಸಭಾಭವನದಲ್ಲಿ, 'ಹಿರೇಮಲ್ಲೂರ ಈಶ್ವರನ್ ಅವರ ಜೀವನ–ಸಾಧನೆ' ಕುರಿತು, ಬೆಂಗಳೂರು ಆಕಾಶವಾಣಿಯ ವಿಶ್ರಾಂತ ನಿರ್ದೇಶಕ ಡಾಕ್ಟರ್ ಬಸವರಾಜ ಸಾದರ, ಉಪನ್ಯಾಸ ನೀಡಿದರು.

<><><>

ಜವಳಿ ಮತ್ತು ಕೈ ಮಗ್ಗ ಇಲಾಖೆಯಿಂದ ಧಾರವಾಡದ, ದಿ. ಇನ್‌ಸ್ಟಿಟ್ಯೂಟ್ ಆಫ್ ಎಂಜನೀಯರ್ಸ್ ಸಂಸ್ಥೆ ಆವರಣದಲ್ಲಿ ಆಯೋಜಿಸಿದ, ರಾಜ್ಯ ಹಾತ್ ಕರ್ಗಾ ಕೈಮಗ್ಗ ಮೇಳದ ಪ್ರದರ್ಶಿನಿಯನ್ನು, ರಾಜ್ಯ ಜವಳಿ ಖಾತೆ ಸಚಿವ ಶಿವಾನಂದ ಪಾಟೀಲ ಉದ್ಘಾಟಿಸಿದರು.

<><><>

ಬೆಳಗಾವಿಯಲ್ಲಿ ಸಡಗರ ಸಂಭ್ರಮದಿಂದ ರಾಜ್ಯೋತ್ಸವ ಆಚರಿಸಲಾಯಿತು. ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ, ಭುವನೇಶ್ವರಿ ಪ್ರತಿಮೆಗೆ ಪೂಜೆ ಸಲ್ಲಿಸಿ, ಧ್ವಜಾರೋಹಣ ಮಾಡಿದರು.

<><><>

ಕರ್ನಾಟಕದಲ್ಲಿಯೇ, 8 ಕೋಟಿಗೂ ಅಧಿಕ, 'ಒನ್ ನೇಷನ್ ಒನ್ ರೇಷನ್ ಕಾರ್ಡ್' ಪೋರ್ಟೆಬಿಲಿಟಿ ವಹಿವಾಟುಗಳು ದಾಖಲಾಗಿವೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಪೂರೈಕೆ ಖಾತೆ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಮಠದ ಆವರಣದಲ್ಲಿ ನಡೆದ, ರಾಜ್ಯೋತ್ಸವ ಕಾರ್ಯಕ್ರಮದಲ್ಲಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಪಾಲ್ಗೊಂಡಿದ್ದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 69ನೇ ಕನ್ನಡ ರಾಜ್ಯೋತ್ಸವ ಹಾಗೂ ಕರ್ನಾಟಕ ನಾಮಕರಣ ಸಂಭ್ರಮದ ಸುವರ್ಣ ಮಹೋತ್ಸವ; 169 ಜನ ಸಾಧಕರಿಗೆ, ಪುರಸ್ಕಾರ ಪ್ರದಾನ.
- ಕರ್ನಾಟಕದ ಸಂಸ್ಕೃತಿ ಮತ್ತು ಸಂಪ್ರದಾಯಗಳು, ಅನುಕರಣೀಯ – ನರೇಂದ್ರ ಮೋದಿ.
- ದೀಪಾವಳಿಯ, ಕಾರ್ತಿಕ ಶುದ್ಧ ಬಲಿ ಪಾಡ್ಯಮಿ ಆಚರಣೆ, ಇಂದು.
- ಮಂಗಳೂರು ಪಿಲಿಕುಳದ, ಡಾಕ್ಟರ್ ಶಿವರಾಮ ಕಾರಂತ ಜೈವಿಕ ಉದ್ಯಾನದಲ್ಲಿ, ಇದೇ 17 ಮತ್ತು 18 ರಂದು 'ಪಿಲಿಕುಳ ಕಂಬಳ'.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ